HOSA DIGANTHA

Friday, January 21st, 2011

# ಕರ್ನಾಟಕ ಪ್ರಬಲ ರಾಜ್ಯ

**ಬೆಂಗಳೂರು:** ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ಬಿ.ಡಿ.ಜತ್ತಿಯವರಂಥ ಪ್ರತಿಭಾವಂತ, ಸಮರ್ಥ ಹಾಗೂ ಪ್ರಾಮಾಣಿಕ ರಾಜಕಾರಣಿಗಳನ್ನು ಕಂಡ ಕರ್ನಾಟಕ ಅತ್ಯಂತ ಪ್ರಭಾವಶಾಲಿ ರಾಜ್ಯ ಎಂದು ರಾಜ್ಯಪಾಲ ಹನ್ಸರಾಜ್ ಭಾರದ್ವಾಜ್ ಬಣ್ಣಿಸಿದರು.

ಜೈನ್ ಯೂನಿವರ್ಸಿಟಿ ಹೊರ ತಂದಿರುವ ಡಾ.ಸಂದೀಪ್ ಶಾಸ್ತ್ರಿ ಅವರ ಕರ್ನಾಟಕ ಪೊಲಿಟಿಕ್ಸ್ ಎಂಬ ಕೃತಿಯನ್ನು



ಗುರುವಾರ ಜೈನ್ ಕಾಲೇಜು ಆವರಣದಲ್ಲಿ ಲೋಕಾರ್ಪಣೆ ಮಾಡಿದ ಅವರು, ನನ್ನ ಸ್ನೇಹಿತರಾಗಿದ್ದ ಜತ್ತಿಯವರು ಬಸವಣ್ಣನವರ ಉದಾತ್ತ ತತ್ವ, ದರ್ಶನಗಳ ಬಗ್ಗೆ ಅರಿವು ಮೂಡಿಸಿದ್ದರು. ಆದರೆ, ಇಂದು ಅಧಿಕಾರ ನಡೆಸುತ್ತಿರುವವರು ಆ ತತ್ವಗಳಿಂದ ರಾಜಕೀಯ ಲಾಭ ಮಾಡಿಕೊಳ್ಳುತ್ತಿದ್ದಾರೆಂದು ವ್ಯಂಗ್ಯವಾಡಿದರು. ಸುಪ್ರೀಂಕೋರ್ಟ್ ವಕೀಲನಾಗಿ, ಕೇಂದ್ರದಲ್ಲಿ 14 ವರ್ಷಗಳ ಕಾಲ ಕಾನೂನು ಸಚಿವನಾಗಿ ಕಾರ್ಯ ನಿರ್ವಹಿಸಿದ ನಾನು ದೇಶದ ಎಲ್ಲ ರಾಜ್ಯಗಳನ್ನೂ ಸುತ್ತಿರುವೆ. ಆದರೆ, ಕರ್ನಾಟಕ ನನ್ನ ಮೇಲೆ ಬೀರಿರುವಷ್ಟು ಪ್ರಭಾವವನ್ನು ಬೇರೆ ಯಾವ ರಾಜ್ಯವೂ ಬೀರಿಲ್ಲವೆಂದರು. ರಾಜ್ಯವು ಸಂಗೀತ, ಶಿಕ್ಷಣ, ಸಾಹಿತ್ಯ, ಕಲೆ, ವಿಜ್ಞಾನ ಮತ್ತಿತರ ಎಲ್ಲ ಪ್ರಮುಖ ಕ್ಷೇತ್ರಗಳಲ್ಲೂ ಇತರ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ವರ್ಣಿಸಿದರು. ಬೆಂಗಳೂರು ಹಾಗೂ ಮೈಸೂರು ಭಾರತದ ಬೋಸ್ಟನ್ ಮತ್ತು ಹಾರ್ವರ್ಡ್‌ಗಳಿದ್ದಂತೆ ಎಂದು ಶ್ಲಾಘಿಸಿದರು.

ವರ್ತಮಾನದ ರೇಜಿಗೆ ಹುಟ್ಟಿಸುವ ರಾಜಕೀಯದ ಬಗ್ಗೆ ವಿಷಾದಿಸಿದ ರಾಜ್ಯಪಾಲರು, ಕಡಿಮೆ ರಾಜಕೀಯ ಮಾಡಿ ಮತ್ತು ಹೆಚ್ಚು ಹೆಚ್ಚು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಕೊಳ್ಳಿರೆಂದು ನೆರೆದಿದ್ದ ಕಾಲೇಜು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜೈನ್ ಯೂನಿವರ್ಸಿಟಿಯ ಚಾನ್ಸೆಲರ್ ಡಾ.ಆರ್. ಚೆನ್‌ರಾಜ್ ಜೈನ್ ಸ್ವಾಗತಿಸಿದರು. ವೈಸ್ ಚಾನ್ಸೆಲರ್ ಡಾ. ಎನ್. ಸುಂದರರಾಜನ್ ಕೃತಿಯ ಕುರಿತು ಮಾತನಾಡಿದರು. ಲೇಖಕ ಡಾ. ಸಂದೀಪ್ ಶಾಸ್ತ್ರಿ ವಂದಿಸಿದರು. ರಿಜಿಸ್ಟ್ರಾರ್ ಪ್ರೊ. ಎನ್. ವಿ.ಎಚ್ ಕೃಷ್ಣನ್ ಉಪಸ್ಥಿತರಿದ್ದರು.